# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 8/2020

**ಚಾ.ಸಾ. :-05**
**ಪ್ರಾ.ಸಾ. :-03**

| | |
|---|---|
| ಹೆಸರು | ಗಣೇಶ |
| ತಂದೆಯ ಹೆಸರು | ದೊಡ್ಡಯ್ಯ |
| ವಯಸ್ಸು | 26 ವರ್ಷ |
| ವೃತ್ತಿ | ಖಾಸಗಿ ನೌಕರಿ |
| ವಾಸ | ಮೈಸೂರು |

ದಿನಾಂಕಃ 04.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ**

1. ಚಾಸಾ 4 ರವರ ಪರಿಚಯ ಇದೆ. ಸಾಕ್ಷಿ ಪಂಚನಾಮೆಯನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಪಂಚನಾಮೆಯನ್ನು ಈಗಾಗಲೇ ನಿಪಿ4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-4(ಬಿ)** ಎಂದು ಗುರುತಿಸಲಾಗಿದೆ. ಮೃತ ಸೋಮು ನನಗೆ ಪರಿಚಯ. ಸುಮಾರು 5-6 ವರ್ಷಗಳ ಹಿಂದೆ ಸೋಮು ಅವರು ಅಪಘಾತದಲ್ಲಿ ಮರಣ ಹೊಂದಿದ್ದಾರೆ ಎಂದು ತಿಳಿದಿದ್ದು, ನಾನು ಘಟನಾ ಸ್ಥಳಕ್ಕೆ ಹೋದಾಗ ಪೊಲೀಸರು ಅಲ್ಲಿಗೆ ಬಂದಿದ್ದು, ಸ್ಥಳೀಕರು ಅಪಘಾತ ವಿಷಯ ನನಗೆ ತಿಳಿಸಿದ್ದು, ನಾನು ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿ ಪೊಲೀಸರು ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಬರೆದಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

**ಪಾಟೀ ಸವಾಲುಃ ಎ ಪಿ ಪಿ ರವರಿಂದಃ**

2. ದಿಃ 26.06.2019 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ 4 ರವರನ್ನು ಪಂಚನಾಮೆಗೆ ಬರಲು ಕೋರಿದ್ದು, ಆ ಪ್ರಕಾರ ನಾವು ಒಪ್ಪಿಕೊಂಡು ಚಾಸಾ 2 ರವರು ತೋರಿಸಿದ ಸ್ಥಳಕ್ಕೆ ಹೋಗಿದ್ದು, ಸದರಿ ಸ್ಥಳದಲ್ಲಿ ಪೊಲೀಸರು ಸ್ಥಳದ ವಿದ್ಯಮಾನಗಳನ್ನು ನಮೂದು ಮಾಡಿ ನಿಪಿ-4 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಅಪಘಾತ ಮಾಡಿದ ಕೆಎ-42-ಎ-2681 ಟಿಪ್ಪರ್ ಲಾರಿ ಮತ್ತು ಕೆಎ-03-ಜೆಯು-3102 ಪಲ್ಸರ್ ದ್ವಿ ಚಕ್ರ ವಾಹನಗಳು ಇತ್ತು ಎಂದರೆ ನೆನಪಿಲ್ಲ. ಸದರಿ ವಾಹನಗಳನ್ನು ಪೊಲೀಸರು ಮುಂದಿನ ತನಿಖೆಗಾಗಿ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಸದರಿ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 4 ಅನ್ನು ನಮಗೆ ಓದಿ ಹೇಳಿ ನನ್ನ, ಚಾಸಾ 2 ಮತ್ತು 4 ರವರ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ಪರಿಚಯವಿದ್ದು ಆರೋಪಿತರಿಗೆ ಸಹಾಯ ಮಾಡಬೇಕೆಂಬ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣಗಳು ಕಂಡು ಬರದೇ ಇದ್ದುದರಿಂದ ಸದರಿಯವರ ಪ್ರಾರ್ಥನೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**